ಶ್ರೀ ವಸಂತ ವಿ. ಸಾಲಿಯಾನ್ : ಮಾನ್ಯ ಅಧ್ಯಕ್ಷರೆ, ಈ ಡಾಕ್ಟರಗಳ ಮತ್ತು ಇತರ ಸಿಬ್ಬಂದಿಗಳ ಕೊರತೆ ಎಷ್ಟು ವರ್ಷಗಳಿಂದ ಇದೆ? ಇದು ಬಹಳ ಪ್ರಾಮುಖ್ಯವಾದ ವಿಷಯ, ನನಗೆ ತಿಳಿದ ಮಟ್ಟಿಗೆ ಇದು ಬಹಳ ವರ್ಷಗಳಿಂದ ಬಾಕಿ ಇದೆ. ಆದುದರಿಂದ ನಾನು ತಮ್ಮ ಮುಖೇನಾ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಬಹಳ ವರ್ಷಗಳಿಂದ ಎಂದರೆ ನಿಮಗೆ ಕಿಟ್ಟಿ ಹೆಸರು, ಏಕೆಂದರೆ ಮೊದಲಿನಿಂದಲೂ ನೀವೇ ಇದ್ದವರು.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಆದುದರಿಂದ ನಾನು ಕೇಳುವುದೇನೆಂದರೆ ಅಲ್ಲಿ ತಜ್ಞ ವೈದ್ಯರುಗಳ ಅವಶ್ಯಕತೆ ಬಹಳ ಪ್ರಾಮುಖ್ಯವಾಗಿ ಬೇಕಾಗಿದೆ. ಏಕೆಂದರೆ ಮಕ್ಕಳ ಆರೋಗ್ಯ ಮತ್ತು ಹೆರಿಗೆಯ ಬಗ್ಗೆ ಇವರ ಅವಶ್ಯಕತೆ ಇದೆ. ಆದುದರಿಂದ ತಜ್ಞ ವೈದ್ಯರುಗಳನ್ನು ಮತ್ತು ಇತರ ಸಿಬ್ಬಂದಿವರ್ಗದವರು ಕೂಡಲೇ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಅಲ್ಲಿ ಮುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇದೆ ಎಂದರೆ ನಿಮ್ಮ ಅಡಳಿತದ 5 ವರ್ಷಗಳು ಸೇರಿ ನಮ್ಮ ಒಂದು ವರ್ಷ ಎರಡು ತಿಂಗಳುಗಳು ಸೇರಿ ಸುಮಾರು 6 ವರ್ಷ ಎರಡು ತಿಂಗಳುಗಳಿಂದ ಎಂದು ನನ್ನ ಹತ್ತಿರ ಪಟ್ಟಿ ಇದೆ. ಇದರ ಹಿಂದಿನ ಮಾಹಿತಿಯ ಪಟ್ಟಿ ನನ್ನ ಬಳಿ ಇಲ್ಲ.

ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಕರೆ ತರುತ್ತಿರುವುದು

158 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಕರೆತರುವುದನ್ನು ನಿಲ್ಲಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಹಲವಾರು ಸರ್ಕಾರಿ ಕಾರ್ಯಕ್ರಮಗಳಿಗೆ ಶಾಲಾ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ರೀತಿ ಶಾಲಾ ಮಕ್ಕಳನ್ನು ಸರ್ಕಾರಿ ಕಾರ್ಯಕ್ರಮಗಳಿಗೆ ಉಪಯೋಗಿಸಿ ಕೊಂಡರೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?*

ಶ್ರೀ ಪ್ರೊ. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಹೌದು.

ಶ್ರೀ ರಾಮಲಿಂಗಾ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆದೇಶ ಇದ್ದರೂ ಕೂಡ ಮಕ್ಕಳನ್ನು ಸಾಕಷ್ಟು ಸಮಾರಂಭಗಳಿಗೆ ಕರೆದುಕೊಂಡು ಹೋಗಿರುವಂಥಾಮ್ಮ ಪತ್ರಿಕೆಗಳಲ್ಲಿ ಬಂದಿದೆ, ಇದು ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿರಬಹುದು. ಈ ರೀತಿಯಾಗಿ ಮಕ್ಕಳನ್ನು ಸಮಾರಂಭಗಳಿಗೆ ಕರೆದುಕೊಂಡು ಹೋದಂತಹ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ದಿನಾಂಕ 11-7-1995 ರಲ್ಲಿ ಉಪ ನಿರ್ದೇಶಕರು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬಾರದೆಂದು ಹೇಳಿದ್ದಾರೆ. ನಮ್ಮದೇ ಇಲಾಖೆಯಲ್ಲಿ ಯಾವುದಾದರೂ ಕಾರ್ಯಕ್ರಮಗಳು ಇದ್ದರೆ ಮಾತ್ರ ಈ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಸರ್ಕಾರಿ ಕಾರ್ಯಕ್ರಮಗಳಿಗೆ ಮಕ್ಕಳನ್ನು ತೊಡಗಿಸಿಕೊಳ್ಳಬಾರದೆಂದು ಆದೇಶವನ್ನು ಕಳುಹಿಸಿದ್ದೇವೆ. ಮೊನ್ನೆ ಚಿಕ್ಕಮಗಳೂರಿನಲ್ಲಿ ಈ ರೀತಿಯಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇದು ನನಗೂ ತಿಳಿದು ಬಂತು. ನಂತರ ಉಪ ನಿರ್ದೇಶಕರು ಕೂಡಲೇ ಎಕ್ಷಪ್ಲನೇಶನ್ ಕೊಟ್ಟು ಯಾರು ಉಪಾಧ್ಯಾಯರು ಈ ರೀತಿಯಾಗಿ ಮಕ್ಕಳನ್ನು ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿದ್ದಾರೆ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇನ್ನು ಈ ಬಗ್ಗೆ ಬೇರೆ ಆಗಿರುವಂಥಾಮ್ಮ ನಮ್ಮ ಅವಗಾಹನೆಗೆ ಬಂದಿಲ್ಲ. ಈ ರೀತಿಯಾಗಿ ಪತ್ರಿಕೆಗಳಲ್ಲಿ ಬಂದಾಗ ನಾವು ಅವರನ್ನು ಕೇಳಿದರೆ ಇಲ್ಲ ಹೋಗಿಲ್ಲವೆಂದು ಹೇಳಿದ್ದಾರೆ. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಹೇಳುತ್ತಿದ್ದೇವೆ. ಈ ಮೂಸ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ನಾವು ಈ ಆದೇಶವನ್ನು ಕಳುಹಿಸಿದ್ದೇವೆ. ಬಿ.ಐ.ಪಿಗಳು ಬರುತ್ತಾರೆಂದು ಮಕ್ಕಳನ್ನು ಗಂಟೆಗಟ್ಟಲೆ ಬಿಸಿಲಿನಲ್ಲಿ ನಿಲ್ಲಿಸುವಂಥ ಸಂಪ್ರದಾಯ ಸರಿಯಾದುದ್ದಲ್ಲ, ಅದನ್ನು ಮೊದಲು ನಿಲ್ಲಿಸಬೇಕೆಂಬ ಬಗ್ಗೆ ಆದೇಶವನ್ನು ಕಳುಹಿಸಿದ್ದೇವೆ. ಇದರ ಬಗ್ಗೆ ತಮಗೆ ಏನಾದರೂ ಅಭಿಪ್ರಾಯಗಳಿದ್ದರೆ ಮತ್ತು ಯಾವುದೇ ಶಾಲೆಗಳಲ್ಲಿ ಈ ರೀತಿಯಾಗಿ ಮಾಡಿದ್ದರೆ ತಮಗೆ ಕೂಡಲೇ ಕಳುಹಿಸಿಕೊಟ್ಟಿ ನಾವು ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆ. ಇದರ ಬಗ್ಗೆ ಸಾರ್ವಜನಿಕರು ಸಹ ಮಾಹಿತಿಯನ್ನು ಕೊಟ್ಟರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈ ರೀತಿಯಾಗಿ ಇಲಾಖೆಯವರು ಏನಾದರೂ ವ್ಯತ್ಯಾಸವನ್ನು ಮಾಡಿದರೆ ನಾವು ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದಂತಹ ಪ್ರಶ್ನೆಯಾಗಿದೆ. ನಾವು ಬೆಂಗಳೂರಿನಲ್ಲಿ ನೋಡುತ್ತಿದ್ದೇವೆ. ವಿವಿಧ ಸರ್ಕಾರಿ ಕಾರ್ಯಕ್ರಮಗಳಲ್ಲಿ ಯಾರೋ ಬಿ.ಐ.ಪಿ.ಗಳು ಬಂದಾಗ ಅವಿಯನ್ನ್ ಇಲ್ಲವಿದ್ದೆ ತಕ್ಷಣ ಸುತ್ತಮುತ್ತಲಿನ ಶಾಲೆಗಳಿಗೆ ಮಸೇಜ್ ಕಳುಹಿಸಿ ಅಲ್ಲಿಂದ ಮಕ್ಕಳನ್ನು ಕರೆಯಿಸಿ ಆ ಕಾರ್ಯಕ್ರಮದಲ್ಲಿ ಕೂರಿಸುತ್ತಾರೆ. ಆ ಎಳ ಮಕ್ಕಳು ಬೆಳಿಗ್ಗೆ ಹೊಟ್ಟೆಗಿಲ್ಲದೆ ತಲೆ ಸುತ್ತಿ ಬೀಳುವಂಥಾದ್ದನ್ನು ನಾವು ಅನೇಕ ಕಾರ್ಯಕ್ರಮಗಳಲ್ಲಿ ನೋಡಿದ್ದೇವೆ. ಆದುದರಿಂದ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಕಾರ್ಯಕ್ರಮಗಳು ಸರಿಯಾದಂತಹ ಸಮಯದಲ್ಲಿ ಪ್ರಾರಂಭವಾಗುವುದಿಲ್ಲ, ಆರಿತ್ಯಿಂದ ಈ ರೀತಿಯ ವಾತಾವರಣವಿದೆ.

ಆದುದರಿಂದ ಇದರ ಬಗ್ಗೆ ಕೇವಲ ಸೂಚನೆ ಇದ್ದರೆ ಸಾಲದು ಇದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಅದು ಆ ವಿಳಂಬಯಿಸಿದ ಮಕ್ಕಳ ಮೇಲೆ ವಿಪರೀತವಾದ ಪರಿಣಾಮವಾಗುತ್ತದೆಂದು ಹೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಈ ಸಂಪ್ರದಾಯ ಬಹಳ ಹಿಂದಿನಿಂದಲೂ ಇದೆ. ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ನಾನು ತಮಗೆ ಹೇಳಿದಂತೆ ದಿ : 11-7-95 ರಲ್ಲಿ ಒಂದು ಆದೇಶವನ್ನು ಕಳುಹಿಸಿ ಈ ರೀತಿಯಾಗಿ ವಿಳಂಬ ಮಕ್ಕಳನ್ನು ಬಿಡಿಸಲೇಬಾರದು ಸರ್ಕಾರಿ ಶಾಲೆಗಳಲ್ಲಿ ಮತ್ತು ಸರ್ಕಾರಿ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಬಾರದೆನ್ನುವ ಈ ಒಂದು ಪದ್ಧತಿಯನ್ನು ಬಿಟ್ಟು ಬಿಡಬೇಕೆಂದು ಆದೇಶವನ್ನು ಕಳುಹಿಸಿದ್ದೇವೆ. ಇದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಬೇಕೆಂಬ ಉದ್ದೇಶದಿಂದಲೇ ನಾವು ಮಾಡಿರುವುದಾಗಿದೆ. ಇದನ್ನು ಯಾರೇ ಹೇಳಿ ನಂತರ ಮಾಡಿರುವುದಲ್ಲ. ಅದನ್ನು ತಿಳಿದುಕೊಂಡೆ ನಾವು ಮಾಡಿರುವುದಾಗಿದೆ.

ಅಧ್ಯಕ್ಷರು : ನಮ್ಮ ಪಕ್ಷದವರು ಅಲ್ಲಿಗೆ ಬಂದಿದೆ. ನಾವು ಕಾರ್ಯಕ್ರಮಗಳಿಗೆ ಹೋಗುತ್ತೇವೆಂದರೆ ಜನರು ಬರುವುದೇ ಇಲ್ಲ. ಆದುದರಿಂದ ಆ ಮಕ್ಕಳನ್ನು ಕರೆದುಕೊಂಡು ಬಂದು ಕೂರಿಸುತ್ತಾರೆ. ಇದಕ್ಕೇನು ಸರ್ಕ್ಯೂಲರ್ ಹೊರಡಿಸುವುದು, ಇದಕ್ಕೆ ನಾವು ಇನ್ನೊಂದು ಸರ್ಕ್ಯೂಲರನ್ನು ಹೊರಡಿಸಬೇಕು. ಯಾರು ಹೋದರೆ ಜನರು ಬರುವುದಿಲ್ಲವೋ ಅವರು ಆ ಕಾರ್ಯಕ್ರಮಗಳಿಗೆ ಹೋಗಬಾರದೆಂದು ಹೊರಡಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತಗೆದುಕೊಳ್ಳುತ್ತೇನೆ.

ಶಾಶ್ವತ ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವುದು.

159 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?*

ಆ) *ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಡಳಿತ ಹೊಂದಿರುವ ಸಂಸ್ಥೆಗಳನ್ನು ಯಾವ ವರ್ಷದಿಂದ ಅನುದಾನಕ್ಕೆ ಒಳಪಡಿಸಲಾಗಿದೆ ಅದಕ್ಕೆ ಕಾರಣಗಳೇನು ?*

ಇ) *ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು (ಯಾವುದಾದರೂ) ಸರ್ಕಾರ ನಿಲ್ಲಿಸಿದೆಯೇ ? ಅದಕ್ಕೆ ಕಾರಣಗಳೇನು ?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.